## ಧರ್ಮದಿಂದ ರೋಗಮುಕ್ತಿ

**ಧರ್ಮೋ ರಕ್ಷತಿ ರಕ್ಷಿತಃ**—"ನಾವು ಧರ್ಮವನ್ನು ರಕ್ಷಿಸಿದರೆ ಅದು ನಮ್ಮನ್ನು ರಕ್ಷಿಸುತ್ತದೆ"—ಎಂಬ ಹೇಳಿಕೆ ಇದೆ. ಅದು ನಮ್ಮನ್ನು ಆಧ್ಯಾತ್ಮಿಕವಾಗಿ ರಕ್ಷಿಸುವುದು ಮಾತ್ರವಲ್ಲದೆ, ಭೌತಿಕವಾಗಿಯೂ ರಕ್ಷಿಸುತ್ತದೆ. ಅದು ಭವರೋಗಕ್ಕೆ ಔಷಧಿಯಾಗಿರುವುದು ಮಾತ್ರವಲ್ಲದೆ ಶಾರೀರಿಕ ರೋಗಕ್ಕೂ ಔಷಧಿಯಾಗಿದೆ. ಇಂದಿನ ಪರ್ಯಾಯ ಔಷಧಿ(alternate medicine)ಯ ಯುಗದಲ್ಲಿ ಧರ್ಮವೂ ಒಂದು ಪರ್ಯಾಯ ಔಷಧಿಯಾಗಿ ತಲೆ ಎತ್ತುವುದರಲ್ಲಿ ಆಶ್ಚರ್ಯವೇನಿಲ್ಲ.

ಅಮೆರಿಕದ ಒಂದು ವರದಿಯ ಪ್ರಕಾರ ಧಾರ್ಮಿಕ ಶ್ರದ್ಧೆಯಿಂದ ರಕ್ತದ ಒತ್ತಡ ಕಡಿಮೆಯಾಗುತ್ತದಂತೆ. "ದಿನನಿತ್ಯದ ಒತ್ತಡವನ್ನು ನಿಭಾಯಿಸಲು ಧಾರ್ಮಿಕಶ್ರದ್ಧೆ ಪರಿಣಾಮಕಾರಿಯಾಗುತ್ತದೆ" ಎಂದು ಡಾ॥ ಪ್ಯಾಟ್ರಿಕ್ ಆರ್. ಸ್ಟೀಫನ್ (Patrick R. Steffen) ಹೇಳುತ್ತಾರೆ. ಧಾರ್ಮಿಕಶ್ರದ್ಧೆ ಅಧಿಕವಿರುವ ಅಮೆರಿಕದ ನೀಗ್ರೋಗಳಲ್ಲಿ ರಕ್ತದ ಒತ್ತಡ ಮತ್ತು ಅದಕ್ಕೆ ಸಂಬಂಧಿಸಿದ ರೋಗಗಳು ಕಡಿಮೆ ಇರುವುದು ಅಧ್ಯಯನದಿಂದ ತಿಳಿದುಬಂದಿದೆಯಂತೆ. ಆಂಗ್ಲ ಭಾಷೆಯಲ್ಲಿ Let go, let God—"ಭಗವಂತನಿಗೇ ಎಲ್ಲ ವಹಿಸಿಬಿಡು"—ಎಂಬ ಹೇಳಿಕೆ ಇದೆ. ಈ ರೀತಿ ದೇವರಲ್ಲಿ ನಿರ್ಭರತೆ ಇದ್ದರೆ ಎಲ್ಲ ಬಗೆಯ ಒತ್ತಡವೂ ಕಡಮೆಯಾಗುವುದರಲ್ಲಿ ಸಂದೇಹವಿಲ್ಲ.

ಯಥಾರ್ಥವಾದ ಧಾರ್ಮಿಕ ಶ್ರದ್ಧೆಯಿಂದ ಆಧ್ಯಾತ್ಮಿಕವಾಗಿ ಪ್ರಯೋಜನವಾಗುವಂತೆಯೇ ಮಾನಸಿಕ ಮತ್ತು ದೈಹಿಕವಾಗಿಯೂ ಪ್ರಯೋಜನವಾಗಬಹುದು. ಆದರೆ ಕೇವಲ ಕಾಯಿಲೆ ವಾಸಿಯಾಗುವುದಕ್ಕಾಗಿಯೇ ಧರ್ಮವನ್ನು ಆಶ್ರಯಿಸುವವರಿಗೆ ಅದರಿಂದ ಅಷ್ಟಾಗಿ ಪ್ರಯೋಜನವಾಗಲಿಕ್ಕಿಲ್ಲ. ದೇವಸ್ಥಾನವನ್ನು ನಡೆಸುವವರಿಗೆ ಆರ್ಥಿಕ ಪ್ರಯೋಜನವಾಗಬಹುದು, ತೀರ್ಥ ಪ್ರಸಾದಗಳ ಬೇಡಿಕೆ ಜಾಸ್ತಿಯಾಗಬಹುದು. ಆಗಲೇ ಆಧ್ಯಾತ್ಮಿಕ ಮೌಲ್ಯವನ್ನು ಕಳೆದುಕೊಳ್ಳುತ್ತಿರುವ ಧರ್ಮ ಇನ್ನೂ ಅವನತಿಯನ್ನು ಹೊಂದಬಹುದು. ಮತ್ತೆ ಧರ್ಮವೂ ರಕ್ತದ ಒತ್ತಡಕ್ಕೆ ಕಾರಣವಾಗಬಹುದು—ರಕ್ತಪಾತಕ್ಕೆ ಕಾರಣವಾಗಿರುವಂತೆಯೇ. **ಧರ್ಮ ಅಲೌಕಿಕವಾದಷ್ಟೂ ಅದರ ಲೌಕಿಕ ಪ್ರಯೋಜನ ಅಧಿಕ, ಆದರೆ ಅದು ಲೌಕಿಕವಾದಷ್ಟೂ ಲೌಕಿಕ ಹಾನಿಯೇ ಅಧಿಕ.** ❖

## ಸೆಪ್ಟೆಂಬರ್ ಹನ್ನೊಂದು

**ಈ**ಗ್ಗೆ ಒಂದು ವರ್ಷದ ಹಿಂದೆ ವಿಶ್ವ ವಾಣಿಜ್ಯ ಭವನವು ನೆಲಸಮವಾಯಿತು. ಇದರೊಂದಿಗೆ ಜನರ ಆಶಾಕಟ್ಟಡವೂ ಉರುಳಿಹೋಗಿರುವಂತೆ ಕಂಡುಬರುತ್ತದೆ. ಇತ್ತೀಚಿಗಿನ TIME/CNN ವರದಿಯ ಪ್ರಕಾರ ಈ ಘಟನೆಯಾಗಿ ಎಂಟು ತಿಂಗಳ ನಂತರವೂ ವಾರದಲ್ಲಿ ಅನೇಕ ಬಾರಿ ಅಮೆರಿಕನರನ್ನು ಭಯೋತ್ಪಾದನೆಯ ಭಯ ಕಾಡುತ್ತಿದೆ. ಇದರಿಂದ ಹಳೆಯ ಭಯಗಳೆಲ್ಲ ಮರುಕಳಿಸಿ ಬಂದು ಅವರನ್ನು ಅತ್ಯಂತ ಕಾತರಕ್ಕೆ ಒಳಪಡಿಸುತ್ತದಂತೆ. ೧೯ ಮಿಲಿಯನ್ ಅಮೆರಿಕನರು ಕಾತರತೆಯ ರೋಗದಿಂದ ನರಳುತ್ತಿದ್ದಾರೆಂದು ವರದಿ ತಿಳಿಸುತ್ತದೆ. ಇವರಲ್ಲಿ ಶೇಕಡ ೩೦ಕ್ಕಿಂತ ಕಡಿಮೆ ಜನರು ಮಾತ್ರ ಈ ರೋಗಕ್ಕೆ ಚಿಕಿತ್ಸೆ ಪಡೆಯುತ್ತಿರುವರಂತೆ. "ಆತುರದಿ ಹಾತೊರೆದು ಬಂದೆ ಅವ್ವ ಎಂದು/ಯಾತರದು ಕಾತರವು ನಿನ್ನ ಬಳಿಗಿಂದು" (ದ.ರಾ.ಬೇಂದ್ರೆ) ಎಂದು ಕಾತರಗೊಂಡವರೆಲ್ಲ ಧರ್ಮದ ಮೊರೆ ಹೋಗುತ್ತಿದ್ದಾರೆ. ಅಮೆರಿಕದಲ್ಲಿ ಈಗ ದೇವಾಲಯ, ಚರ್ಚು, ಆಶ್ರಮಗಳಿಗೆ ಹೋಗುವವರ ಸಂಖ್ಯೆ ಅಧಿಕವಾಗಿದೆಯಂತೆ.

ಕ್ಯಾಲಿಫೋರ್ನಿಯ ವೇದಾಂತ ಸೊಸೈಟಿಯ ಪ್ರವ್ರಾಜಿಕಾ ವ್ರಜಪ್ರಾಣಾ ಹೇಳುತ್ತಾರೆ: "ಸೆಪ್ಟೆಂಬರ್ ಹನ್ನೊಂದರ ನಂತರ ಅಪೂರ್ವ ಬದಲಾವಣೆ ಕಂಡುಬರುತ್ತಿದೆ. ದೇವಾಲಯಕ್ಕೆ ಬಂದು ಶಾಂತವಾಗಿ ಕುಳಿತುಕೊಳ್ಳುವವರ ಸಂಖ್ಯೆ ಗಮನಾರ್ಹವಾಗಿ ಅಧಿಕವಾಗಿದೆ. ಸೆಪ್ಟೆಂಬರ್ ಹನ್ನೊಂದರ ನಂತರದ ಭಾನುವಾರದಂದು ಉಪನ್ಯಾಸಕ್ಕೆ ಎಂದೆಂದಿಗಿಂತಲೂ ಅಧಿಕ ಸಂಖ್ಯೆಯಲ್ಲಿ ಜನ ಬಂದಿದ್ದರು."

ಎಷ್ಟೇ ಆದರೂ ಮನುಷ್ಯ ಬಯಸುವುದು ನೆಮ್ಮದಿಯ ಜೀವನವನ್ನು. ಇದಕ್ಕಾಗಿ ಸಂಪತ್ತು ಮತ್ತು ಸುಖಸಾಧನಗಳನ್ನು ವೃದ್ಧಿಗೊಳಿಸುತ್ತಾ ಹೋಗುತ್ತಾನೆ. ಇದರಿಂದ ವಾಣಿಜ್ಯ ಅಭಿವೃದ್ಧಿ ಹೊಂದುತ್ತದೆ. ವಾಣಿಜ್ಯದ ಅಭಿವೃದ್ಧಿಯಿಂದ ಮನುಷ್ಯ ತನ್ನ ನೆಲೆಯನ್ನು ಕಳೆದುಕೊಂಡು ಮತ್ತಷ್ಟು ದುಃಖಕ್ಕೀಡಾಗುತ್ತಾನೆ. ವಿಶ್ವವಾಣಿಜ್ಯ ಕೇಂದ್ರ ಭಗ್ನವಾದುದು ವಾಣಿಜ್ಯ ಸಂಸ್ಕೃತಿಯ ವಿನಾಶದ ಮುನ್ಸೂಚನೆಯೆ? ಇನ್ನು ಮನುಷ್ಯನು ಹೆಚ್ಚು ಹೆಚ್ಚು ಅಂತರ್ಮುಖಿಯಾಗಿ ತನ್ನೊಳಗೇ ಹೆಚ್ಚು ಸುಖವನ್ನು ಪಡೆಯುವ ಪ್ರಯತ್ನ ಮಾಡುತ್ತಾನೆಯೆ? "ದುಡ್ಡೇ ದೊಡ್ಡಪ್ಪ" ಮನೋಭಾವ ಹೊರಟುಹೋಗಿ "ದುಡ್ಡೇ ಬೇಡಪ್ಪ" ಎಂಬ ಮನೋವೃತ್ತಿ ಪ್ರಬಲವಾಗುತ್ತದೆಯೆ?

**"ಸತ್ಯ ನಮ್ಮನ್ನು ಗೌರವಿಸುವುದಿಲ್ಲ, ನಾವು ಸತ್ಯವನ್ನು ಗೌರವಿಸಬೇಕು ಇಲ್ಲವೇ ನಾಶವಾಗಬೇಕು"** ಎನ್ನುತ್ತಾರೆ ಸ್ವಾಮಿ ವಿವೇಕಾನಂದರು. **ಸತ್ಯದ ತಳಹದಿಯ ಮೇಲೆ ನಮ್ಮ ಜೀವನ ಸೌಧವನ್ನು ನಿರ್ಮಿಸಬೇಕು. ಇಲ್ಲದಿದ್ದರೆ ಅದು ವಿಶ್ವವಾಣಿಜ್ಯ ಕೇಂದ್ರದಂತೆ ಉರುಳಿಬೀಳುತ್ತದೆ.** ❖